ಶಿವಮೊಗ್ಗ-2

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.

ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್

ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

ಕೈವ : ಶಿವ : ವಿಭಾಗ : ಮಾಹಿತಿ ಹಕ್ಕು : 2013 : 341

ಶಿವಮೊಗ್ಗ
22.06.2013

ಗೆ
ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಭೂಸ್ವಾಧೀನ)
ಕೆ.ಎಸ್.ಎಸ್.ಐ.ಡಿ.ಸಿ.
ಕೈಗಾರಿಕಾ ವಸಾಹತು, ರಾಜಾಜಿನಗರ,
ಬೆಂಗಳೂರು-10.

ಮಾನ್ಯರೆ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005 ಅಡಿಯಲ್ಲಿ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ : 1. ಕೇಂದ್ರ ಕಛೇರಿ ಸುತ್ತೋಲೆ ಸಂಖ್ಯೆ : ಆಡಳಿತ : ಸಿಬ್ಬಂದಿ(2) : ಮಾಹ : 2013/ 217 ದಿನಾಂಕ : 15.04.2013.

2. ಈ ಕಛೇರಿ ಪತ್ರ ಸಂಖ್ಯೆ : 221 ದಿನಾಂಕ : 25.05.2013.

---

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಈ ಕಛೇರಿ ಪತ್ರವನ್ನು ಮುಂದುವರೆಸುತ್ತಾ, ಕೇಂದ್ರ ಕಛೇರಿ ಸಿಬ್ಬಂದಿ ವಿಭಾಗದಿಂದ ದೂರವಾಣಿ ಮೂಲಕ ಸೂಚಿಸಿದಂತೆ, ಉಲ್ಲೇಖ ಪತ್ರ (1)ರಲ್ಲಿ ಸಲ್ಲಿಸಲಾಗಿದ್ದ ಮಾಹಿತಿ ಹಕ್ಕು ಅಧಿನಿಯಮ 2005ರ ವಿಧಿ 4(1) (ಎ) ಮತ್ತು 4(1) (ಬಿ) ಪ್ರಕಾರ, ಶಿವಮೊಗ್ಗ ವಿಭಾಗೀಯ ಕಛೇರಿಗೆ ಸಂಬಂಧಿಸಿದ ಮಾಹಿತಿಯನ್ನು ಪರಿಷ್ಕರಿಸಿ, ಪರಿಷ್ಕೃತ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕೃಪಾಪೂರ್ಣ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಅಡಕ : ಮೇಲಿನಂತೆ

22/06/13
ವ್ಯವಸ್ಥಾಪಕರು(ಕೈವ)
ಶಿವಮೊಗ್ಗ ವಿಭಾಗ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
KSSIDC
24 JUN 2013
ಬೆಂಗಳೂರು-560 010
ಸಂಖ್ಯೆ......1099.........

## ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
## ಶಿವಮೊಗ್ಗ ವಿಭಾಗ.

ಮಾಹಿತಿ ಹಕ್ಕು ಅಧಿನಿಯಮ ವಿಧಿ 4(1(ಬಿ) ಅಡಿ ಕೆ.ಎಸ್.ಎಸ್.ಐ.ಡಿ.ಸಿ. ಶಿವಮೊಗ್ಗ ವಿಭಾಗೀಯ ಕಚೇರಿಯ ಮಾಹಿತಿ

### i.. ಆದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು :-

ಶಿವಮೊಗ್ಗ ವಿಭಾಗೀಯ ಕಚೇರಿಯು ದಿನಾಂಕ 1989 ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ.

ಅ). ರಚನೆ: ಶಿವಮೊಗ್ಗ ವಿಭಾಗೀಯ ಕಚೇರಿಯ ಅಧಿಕಾರಿ ವರ್ಗದ ವಿವರ ಈ ಕೆಳಗಿನಂತಿದೆ.

ವ್ಯವಸ್ಥಾಪಕರು(ಕೈವ)

ಶೀಘ್ರಲಿಪಿಗಾರರು

ಹಿರಿಯ ಸಹಾಯಕರು,

ಕಿರಿಯ ಸಹಾಯಕರು

ನಾಲ್ಕನೇ ದರ್ಜೆ ನೌಕರರು.

ಆ). ಕಾರ್ಯಗಳು ಮತ್ತು ಕರ್ತವ್ಯಗಳು:

1. ನಿಗಮವು ಸರ್ಕಾರದಿಂದ ಮತ್ತು ಕೆ.ಐ.ಎ.ಡಿ.ಬಿ. ಪ್ರಾಧಿಕಾರದಿಂದ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಜಮೀನುಗಳನ್ನು ಹಂಚಿಕೆ ಪಡೆದು ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿ ಮೂಲಭೂತ ಸೌಲಭ್ಯಗಳೊಂದಿಗೆ ಕೈಗಾರಿಕಾ ನಿವೇಶನಗಳು / ಮಳಿಗೆಗಳನ್ನು ನಿರ್ಮಿಸಿ ಅರ್ಹ ಉದ್ಯಮಿಗಳಿಗೆ ಹಂಚಿಕೆ ಮಾಡುವ ಮೂಲಕ ವಿದ್ಯಾವಂತ ಯುವಕ ಮತ್ತು ಯುವತಿಯರನ್ನು ಸ್ವಾವಲಂಭಿಗಳನ್ನಾಗಿ ರೂಪಿಸುವುದು ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಹಾಗು ಒಟ್ಟಾರೆ ರಾಜ್ಯದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವ ಮಹತ್ತರ ಕಾರ್ಯಗಳನ್ನು ನಿಗಮವು ನಿರ್ವಹಿಸಿಕೊಂಡು ಬರುತ್ತಿದೆ.

2. ನಿಗಮವು ಕೈಗಾರಿಕಾ ಘಟಕಗಳಿಗೆ ಪೂರಕವಾದ C.R. Sheet, H.R. Sheet. Angles, M.S. Plate, Wire Rod, Rounds, Cement ಇತ್ಯಾದಿ ಗುಣಮಟ್ಟದ ಕಚ್ಚಾ ಸರಕುಗಳನ್ನು ಸಹ ಪೂರೈಸುವ ಕಾರ್ಯವನ್ನು ಸಹ ನಿರ್ವಹಿಸುತ್ತಿದೆ.

3. ಶಿವಮೊಗ್ಗ ವಿಭಾಗೀಯ ಕಚೇರಿ ವ್ಯಾಪ್ತಿಗೆ ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ ಮತ್ತು ಹಾಸನ ಜಿಲ್ಲೆಗಳು ಒಳಪಡುತ್ತವೆ. ಈ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳು ಮತ್ತು ಈ ವಸಾಹತುಗಳಲ್ಲಿ ನಿರ್ಮಿಸಿರುವ ಕೈಗಾರಿಕಾ ಮಳಿಗೆ ಹಾಗೂ ಅಭಿವೃದ್ಧಿ ಪಡಿಸಿರುವ ನಿವೇಶನಗಳ ವಿವರ ಈ ಕೆಳಗಿನಂತಿದೆ.

ಮುಂದುವರೆದಿದೆ,,,,,2

| ಕ್ರ ಸಂ | ಕೈಗಾರಿಕಾ ವಸಾಹತು | ನಿರ್ಮಿಸಿರುವ ಒಟ್ಟು | | ಹಂಚಿಕೆ ಮಾಡಿರುವ ಒಟ್ಟು | | ಖಾಲಿಯಿರುವ ಒಟ್ಟು | | ಕ್ರಯ ಪತ್ರ ನೀಡಿರುವ ಒಟ್ಟು | |
|---|---|---|---|---|---|---|---|---|---|
| | | ಮಳಿಗೆ ಗಳು | ನಿವೇಶನ ಗಳು | ಮಳಿಗೆ ಗಳು | ನಿವೇಶನ ಗಳು | ಮಳಿಗೆ ಗಳು | ನಿವೇಶನ ಗಳು | ಮಳಿಗೆ ಗಳು | ನಿವೇಶನ ಗಳು |
| 1 | ಶಿವಮೊಗ್ಗ | 99 | 81 | 99 | 81 | - | - | 96 | 62 |
| 2 | ಮಂಡ್ಲಿ ಕಲ್ಲೂರು | 20 | 37 | 20 | 37 | - | - | 07 | 12 |
| 3 | ಭದ್ರಾವತಿ | 21 | 01 | 21 | 01 | - | - | 18 | 01 |
| 4 | ಸಾಗರ | 40 | 99 | 40 | 99 | - | - | 34 | 28 |
| 5 | ಹೊಸನಗರ | - | 36 | - | 36 | - | - | - | |
| 6 | ಶಿರಾಳಕೊಪ್ಪ | 06 | 06 | 06 | 06 | - | - | 06 | 06 |
| 7 | ಚಿಕ್ಕಮಗಳೂರು | 28 | 74 | 28 | 74 | -- | - | 11 | 39 |
| 8 | ಬೀರೂರು | 14 | 41 | 14 | 41 | - | - | 10 | 24 |
| 9 | ನರಸಿಂಹರಾಜಪುರ | - | 50 | - | 02 | - | 48 | - | |
| 10 | ಹಾಸನ | 64 | 69 | 61 | 69 | 03 | - | 37 | 40 |
| 11 | ಅರಸೀಕೆರೆ | 08 | 38 | 08 | 33 | - | 05 | 04 | 08 |
| 12 | ಹೊಳೆನರಸೀಪುರ | 18 | 10 | 18 | 10 | - | - | 06 | 02 |
| 13 | ಚೆನ್ನರಾಯಪಟ್ಟಣ | 10 | 04 | 10 | 04 | - | - | 03 | - |
| 14 | ಸಕಲೇಶಪುರ | 12 | 38 | 12 | 36 | - | 02 | 06 | 08 |
| 15 | ಗಂಡಸಿ | 08 | 20 | 01 | 18 | 07 | 02 | - | -- |
| 16 | ಬೇಲೂರು | - | 44 | - | 44 | | - | - | - |
| | ಒಟ್ಟು | 347 | 650 | 337 | 593 | 10 | 57 | 238 | 230 |

1. ಅರಸೀಕೆರೆ ಕೈಗಾರಿಕಾ ವಸಾಹತುವಿನಲ್ಲಿ ಖಾಲಿಯಿರುವ 05 ಸಂಖ್ಯೆ ನಿವೇಶನಗಳ ಮೇಲ್ಭಾಗದಲ್ಲಿ ಹೆಚ್.ಟಿ. ಲೈನ್ ಹಾದು ಹೋಗಿರುವುದರಿಂದ ಸದರಿ ನಿವೇಶನಗಳನ್ನು ಹಂಚಿಕೆಗೆ ಪರಿಗಣಿಸಿರುವುದಿಲ್ಲ.
2. ಸಕಲೇಶಪುರ ಕೈಗಾರಿಕಾ ವಸಾಹತುವಿನಲ್ಲಿ ಖಾಲಿಯಿರುವ 02 ಸಂಖ್ಯೆ ನಿವೇಶನಗಳ ಭಾಗಶಃ ಜಾಗವನ್ನು ನ್ಯಾಯಾಂಗ ಇಲಾಖೆಯವರು ಒತ್ತುವರಿ ಮಾಡಿರುವುದರಿಂದ ಈ ನಿವೇಶನಗಳಿಗೆ ಸಂಪರ್ಕ ರಸ್ತೆ ಕಡಿತಗೊಂಡಿರುತ್ತದೆ.. ಈ ಹಿನ್ನಲೆಯಲ್ಲಿ ಈ ನಿವೇಶನಗಳನ್ನು ಹಂಚಿಕೆಗೆ ಪರಿಗಣಿಸಿರುವುದಿಲ್ಲ.
3. ಗಂಡಸಿ ಕೈಗಾರಿಕಾ ವಸಾಹತುವಿನಲ್ಲಿ ಖಾಲಿಯಿರುವ 02 ಸಂಖ್ಯೆ ನಿವೇಶನಗಳ ಜಾಗವನ್ನು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಒತ್ತುವರಿ ಮಾಡಿ, *ಈ ನಿವೇಶನಗಳಿಗೆ ಹೊಂದಿಕೊಂಡಂತೆ* ಇರುವ ಸರ್ಕಾರಿ ಜಾಗವನ್ನು ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಇವರಿಂದ ಹಂಚಿಕೆ ಮಾಡಿಸಿಕೊಂಡಿರುತ್ತಾರೆ. ಒತ್ತುವರಿ ಮಾಡಿರುವ ನಿಗಮದ ಜಾಗವನ್ನು ತೆರವು ಮಾಡಲು ಕಂದಾಯ ಇಲಾಖೆಯೊಂದಿಗೆ ಪತ್ರವ್ಯವಹಾರ ನಡೆಯುತ್ತಿರುವುದರಿಂದ ಸದರಿ ನಿವೇಶನಗಳನ್ನು ಹಂಚಿಕೆಗೆ ಪರಿಗಣಿಸಿರುವುದಿಲ್ಲ.

ಶಿವಮೊಗ್ಗ ವಿಭಾಗೀಯ ಕಚೇರಿಯು ನಿಗಮದ ಮಂಡಳಿ ಸಭೆಯ ನಿರ್ಣಯಗಳು ಮತ್ತು ಕೇಂದ್ರ ಕಚೇರಿಯಿಂದ ಕಾಲ ಕಾಲಕ್ಕೆ ಹೊರಡಿಸುವ ಆದೇಶ / ಸುತ್ತೋಲೆಗಳಿಗೆ ಅನುಗುಣವಾಗಿ ಈ ಕೆಳಕಂಡ ಕೆಲಸ ಕಾರ್ಯಯಗಳನ್ನು ನಿರ್ವಹಿಸಲಾಗುತ್ತಿದೆ.

1. ಶಿವಮೊಗ್ಗ ವಿಭಾಗೀಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆಗೆ ಲಭ್ಯವಾಗುವ ಕೈಗಾರಿಕಾ ಮಳಿಗೆ / ನಿವೇಶನಗಳನ್ನು ಹಂಚಿಕೆ ಮಾಡುವ ಸ0ಬಂಧವಾಗಿ, ನಿಗಮದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಒಪ್ಪಿಗೆ ಪಡೆದು ಪತ್ರಿಕಾ ಪ್ರಕಟಣೆ ಹೊರಡಿಸುವುದು.

2. ಪತ್ರಿಕಾ ಪ್ರಕಟಣೆಗೆ ಎದುರಾಗಿ ಸ್ವೀಕರಿಸುವ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ ಮಳಿಗೆ / ನಿವೇಶನ ಹಂಚಿಕೆ ಉಪ ಸಮಿತಿ ಸಭೆಯ ಮುಂದೆ ಪರಿಶೀಲನೆಗೆ ಒಪ್ಪಿಸುವುದು.

*ಮು0ದುವರೆದಿದೆ,,,,,3*